# ಫಿಕ್ಸ್ ಆದ 'ಫಿಕ್ಸಿಟ್'



ಆಟೊಮೊಬೈಲ್ ಉದ್ಯಮ ವಲಯದಲ್ಲಿ ಈತನನ್ನು 'ಮಿಸ್ಟರ್ ಫಿಕ್ಸಿಟ್' ಎಂದೇ ಕರೆಯುತ್ತಾರೆ. ಇನ್ನೇನು ದಿವಾಳಿಯಾಗಿ ಬಾಗಿಲು ಮುಚ್ಚುತ್ತದೆ ಎಂದುಕೊಂಡಿದ್ದ ನಿಸ್ಸಾನ್ ಕಾರು ಕಂಪೆನಿಯನ್ನು ತನ್ನ ಜಾಣ್ಮೆಯ ಆಡಳಿತ ತಂತ್ರಗಳಿಂದ, ಅತ್ಯಂತ ಲಾಭದಾಯಕ ಉದ್ಯಮನ್ನಾಗಿಸಿದ ಕೀರ್ತಿ ಈತನದ್ದು. ರೆನೋ (Renault), ನಿಸ್ಸಾನ್ ಮತ್ತು ಮಿಟ್ಸುಬಿಷಿ – ಈ ಮೂರೂ ಕಂಪನಿಗಳ ಅಲಯನ್ಸ್ ಚೇರ್‌ಮನ್ ಮತ್ತು ಸಿಇಓ ಆಗಿದ್ದವನೀತ. ಉದ್ಯಮರಂಗದಲ್ಲಿ ಫೀನಿಕ್ಸ್‌ನಂತೆ ಮೇಲಕ್ಕೆದ್ದ ಈತ ಕಳೆದ ಎರಡು ತಿಂಗಳಿಂದ ಜೈಲಿನಲ್ಲಿದ್ದಾನೆ. ಜಾಮೀನು ಸಿಗುತ್ತಿಲ್ಲ. ಪ್ರತಿಸಲವೂ ಈತನ ಮೇಲೆ ಹೊಸ ಹೊಸ ಆರೋಪಗಳನ್ನು ಹೊರಿಸಲಾಗುತ್ತಿದೆ. ಈತ ಕಾರ್ಲೋಸ್ ಘೋನ್. ಇಂಗ್ಲಿಷ್‌ನಲ್ಲಿ Ghosn ಎಂದಿದ್ದರೂ ಫ್ರೆಂಚ್ ಉಚ್ಚಾರದಲ್ಲಿ 'ಎಸ್' ಸೈಲೆಂಟ್. ಈತನ ವಿರುದ್ಧದ ಆರೋಪಗಳು ಎಷ್ಟು ಭಾರೀ ಇವೆಯೆಂದರೆ, ಈತನ ಅಭಿಮಾನಿಗಳೂ ಈಗ ಸೈಲೆಂಟ್ ಆಗಿದ್ದಾರೆ. 20 ವರ್ಷಗಳ ಶ್ರಮದ ಮೂಲಕ ಆಟೊಮೊಬೈಲ್ ಕ್ಷೇತ್ರದಲ್ಲಿ ಈತ ಕಟ್ಟಿಕೊಂಡ ವೈಯಕ್ತಿಕ ಚರಿಷ್ಮಾ ಮಣ್ಣುಪಾಲಾಗಿದೆ. ಹಣಕಾಸು ಅವ್ಯವಹಾರ, ತನ್ನ ಸಂಭಾವನೆಯ ವಿಷಯದಲ್ಲಿ ಕಂಪನಿಗೆ ಕಳ್ಳಲೆಕ್ಕ ಕೊಟ್ಟದ್ದು, ವೈಯಕ್ತಿಕ ಸಾಲವನ್ನು ಕಂಪನಿ ಮೇಲೆ ಹೊರಿಸಿದ್ದು – ಹೀಗೆ ಈ ಆರೋಪಗಳ ಪಟ್ಟಿ ಮುಂದುವರಿದಿದೆ.

ಫ್ರೆಂಚ್ ಉದ್ಯಮಿ ಕಾರ್ಲೋಸ್ ಘೋನ್ ಹುಟ್ಟಿದ್ದು ಬ್ರೆಜಿಲ್‌ನಲ್ಲಿ. ಪೌರತ್ವ ಲೆಬನಾನ್ ದೇಶದ್ದು. ಬಾಲ್ಯದ ವಿದ್ಯಾಭ್ಯಾಸ ಲೆಬನಾನ್‌ನಲ್ಲೇ. ಅಲ್ಲಿಂದ ಅಪ್ಪ–ಅಮ್ಮನ ಜೊತೆ ಪ್ಯಾರಿಸ್‌ಗೆ ಪಯಣ. ಅಲ್ಲಿಯ ಪಾಲಿಟೆಕ್ನಿಕ್‌ನಲ್ಲಿ ಎಂಜಿನಿಯರಿಂಗ್ ಓದು. ಅಜ್ಜ ಬಿಚರಾ ಘೋನ್, ಹಲವು ಉದ್ಯಮಗಳನ್ನು ನಡೆಸುತ್ತಿದ್ದ. ಹಾಗಾಗಿ ಉದ್ಯಮಿಯಾಗಲು ಕುಟುಂಬದ ನೆರವೂ ಸಿಕ್ಕಿತು. ಸಹಜವಾಗಿಯೇ ಮಿಷೆಲಿನ್ ನಾರ್ತ್ ಅಮೆರಿಕಾ ಕಂಪನಿಯ ಸಿಇಓ ಹುದ್ದೆಗೇರಿದ.

1996ರಲ್ಲಿ ರೆನೋ ಕಾರು ಕಂಪನಿ ಬಹುತೇಕ ದಿವಾಳಿಯ ಅಂಚಿನಲ್ಲಿತ್ತು. ಅದರ ಸಿಇಓ ಲೂಯಿಸ್ ಸ್ವೆಟ್ಜರ್ ಕಂಪನಿಯನ್ನು ತನ್ನ ಡೆಪ್ಯುಟಿಯಾಗಿ ಕಾರ್ಲೋಸ್‌ನನ್ನು ಕರೆಸಿಕೊಂಡ. ಕಂಪನಿಯನ್ನು ಮೇಲೆತ್ತುವ ಹೊಣೆ ಕಾರ್ಲೋಸ್ ಮೇಲೆ ಬಿತ್ತು. 1998– 2000, ಕಾರ್ಲೋಸ್‌ನ ಆಡಳಿತ ಸಾಮರ್ಥ್ಯವನ್ನು ಒರೆಗೆ ಹಚ್ಚಿದ ಅವಧಿ. ಕಂಪನಿಯಲ್ಲಿ ಅಗತ್ಯಕ್ಕಿಂತ ಹೆಚ್ಚು ನೌಕರರಿದ್ದಾರೆ ಎನ್ನುವುದನ್ನು ಮನಗಂಡ ಕಾರ್ಲೋಸ್, ಮೊದಲು ರೂಪಿಸಿದ್ದು ಖರ್ಚು ಕಡಿತದ ಸ್ಕೀಮ್. ಅನಗತ್ಯ ಎನ್ನಿಸಿದ ವಿಭಾಗಗಳಲ್ಲಿ ಕೆಲಸಗಾರರ ಸಂಖ್ಯೆ ಕಡಿಮೆ ಮಾಡಿದ. ಉತ್ಪಾದನೆಯ ವಿಧಾನಗಳನ್ನು ಮರುರೂಪಿಸಿದ. ವಾಹನಗಳ ಬಿಡಿಭಾಗಗಳ ಗುಣಮಟ್ಟ ಹೆಚ್ಚಳಕ್ಕೆ ಕ್ರಮ ಕೈಗೊಂಡ. ಜೊತೆಗೇ ರೆನೋದ ಹೊಸ ಮಾಡೆಲ್‌ಗಳನ್ನು ಮಾರುಕಟ್ಟೆಗೆ ತಂದ. ಪ್ರತಿಯೊಬ್ಬ ಕೆಲಸಗಾರನಿಗೂ ಹೊಣೆಗಾರಿಕೆ ಫಿಕ್ಸ್ ಮಾಡಿ, ಜಪಾನ್ ಮಾದರಿಯ ಆಡಳಿತ ರೂಪಿಸಿದ. ಸಂಶೋಧನೆ ಮತ್ತು ಅಭಿವೃದ್ಧಿ ವ್ಯವಸ್ಥೆಯನ್ನು ಕೇಂದ್ರೀಕರಣಗೊಳಿಸಿದ. ನಷ್ಟದಲ್ಲಿದ್ದ ಕಂಪನಿ ಚೇತರಿಸಿತು. ಮೂರನೇ ವರ್ಷದಲ್ಲೇ ಕಾರು ಮಾರಾಟ ಹೆಚ್ಚಿ ಲಾಭ ಹೆಚ್ಚಿತು. ಆಟೊಮೊಬೈಲ್ ಉದ್ಯಮ ಈತನನ್ನು 'ಮಿಸ್ಟರ್ ಫಿಕ್ಸಿಟ್' ಎಂದೇ ಕರೆಯತೊಡಗಿತು.

ಕಾರ್ಲೋಸ್ ಅಷ್ಟಕ್ಕೇ ಸುಮ್ಮನಾಗಲಿಲ್ಲ. ದೈತ್ಯ ಕಾರು ಕಂಪನಿಗಳನ್ನು ಎದುರಿಸಲು ಮಾರುಕಟ್ಟೆ ತಂತ್ರಗಳನ್ನು ರೂಪಿಸಿದ. ಇತರ ಕಂಪನಿಗಳ ಮೈತ್ರಿ ಸಾಧಿಸಿದ. ಮೊದಲು ನಿಸ್ಸಾನ್ ಜೊತೆಗೆ ಒಪ್ಪಂದ. ಬಳಿಕ ಮಿಟ್ಸುಬಿಷಿ ಜೊತೆಗೂಡಿತು. ಈ ಮೈತ್ರಿಯಿಂದಾಗಿ ಮೂರೂ ಕಂಪನಿಗಳ ಮಾರುಕಟ್ಟೆ ವಿಸ್ತರಿಸಿತು. 2018ರಲ್ಲಿ ನಿಸ್ಸಾನ್ ಕಂಪನಿಯೊಂದೇ 10.8 ದಶಲಕ್ಷ ವಾಹನಗಳನ್ನು ಮಾರಾಟ ಮಾಡಿತು. ನಿಸ್ಸಾನ್‌ನಲ್ಲಿ ರೆನೊ ಕಂಪನಿ ಶೇಕಡಾ 43.4ರಷ್ಟು ಷೇರು ಹೊಂದಿದ್ದರೆ, ನಿಸ್ಸಾನ್ ಕಂಪನಿಯೂ ರೆನೋದಲ್ಲಿ ಶೇಕಡಾ 15ರಷ್ಟು ಮತ್ತು ಮಿಟ್ಸುಬಿಷಿಯಲ್ಲಿ ಶೇಕಡಾ 34ರಷ್ಟು ಪಾಲು ಹೊಂದಿತು. 2010ರಲ್ಲಿ ಜಾಗತಿಕ ಅಟೊಮೊಬೈಲ್ ಮಾರಾಟದಲ್ಲಿ ಶೇಕಡಾ 10ರಷ್ಟು ಪಾಲು ಹೊಂದಿದ್ದ ಈ ಅಲಯನ್ಸ್, 2017ರಲ್ಲಿ ಮೂರನೇ ಅತಿದೊಡ್ಡ ಆಟೊಮೊಬೈಲ್ ಕಂಪನಿ ಹೊರಹೊಮ್ಮಿತು.

ಕಾರ್ಲೋಸ್‌ನನ್ನು ಹಲವು ಪ್ರಶಸ್ತಿಗಳು ಹುಡುಕಿಕೊಂಡು ಬಂದವು. 2002ರಲ್ಲಿ ಫಾರ್ಚೂನ್‌ನ 'ಏಷ್ಯಾ ಬಿಸಿನೆಸ್‌ಮ್ಯಾನ್ ಆಫ್ ದಿ ಇಯರ್' ಪ್ರಶಸ್ತಿ ಸಿಕ್ಕಿತು. ಅಮೆರಿಕದ ಹೊರಗಿರುವ 10 ಪ್ರಭಾವಶಾಲಿ ಉದ್ಯಮಿಗಳಲ್ಲಿ ಒಬ್ಬ ಎಂಬ ಗೌರವ ಪ್ರಶಸ್ತಿ ಲಭಿಸಿತು. ಫಾರ್ಚೂನ್‌ನ ಏಷ್ಯನ್ ಎಡಿಷನ್ ಈತನನ್ನು 'ಮ್ಯಾನ್ ಆಫ್ ದಿ ಇಯರ್' ಎಂದು ಘೋಷಿಸಿತು.

64ರ ಹರೆಯದ ಕಾರ್ಲೋಸ್ (ಬರ್ತ್‌ಡೇ 9/3/1954) ಜಪಾನೀ ಮೂಲದ ನಿಸ್ಸಾನ್ ಕಂಪನಿಯ ಆಡಳಿತವನ್ನು ಜಪಾನ್‌ನಿಂದ ಹೊರಗೊಯ್ಯುವ ನಿರ್ಧಾರ ಕೈಗೊಂಡದ್ದು ಆತನಿಗೆ ಮುಳುವಾದಂತೆ ಕಾಣಿಸುತ್ತಿದೆ. 'ರೆನೋ ಮತ್ತು ಮಿಟ್ಸುಬಿಷಿ ಕಂಪನಿಗಳ ವಿಲೀನ ನಿರ್ಧಾರದ ಬಗ್ಗೆ ಸಹಮತವಿಲ್ಲದ ನಿಸ್ಸಾನ್‌ನ ಕೆಲವು ಅಧಿಕಾರಿಗಳು ನನ್ನ ವಿರುದ್ಧ ಪಿತೂರಿ ನಡೆಸಿದ್ದಾರೆ' ಎಂದು ಬಂಧನದಲ್ಲಿರುವ ಕಾರ್ಲೋಸ್ ಪ್ರತಿಕ್ರಿಯೆ ನೀಡಿದ್ದಾನೆ. ಎರಡು ವರ್ಷ ವಯಸ್ಸಾಗಿದ್ದಾಗ ಕಾರ್ಲೋಸ್, ಕೊಳಚೆ ನೀರನ್ನು ಕುಡಿದು ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದನಂತೆ. ಆತನ ಸಲುವಾಗಿಯೇ ಆತನ ಅಮ್ಮ ಮೊದಲು ರಿಯೊಗೆ ಮತ್ತು ನಂತರ ಬೆರೂತ್‌ಗೆ ವಾಸಸ್ಥಾನಗಳನ್ನು ಬದಲಾಯಿಸಿದಳಂತೆ. ಆದರೆ ಈಗ ಭ್ರಷ್ಟಾಚಾರ ಕೊಳಚೆ ನೀರು ಕಾರ್ಲೋಸ್‌ನ ಉದರ ಹೊಕ್ಕಿದೆ. ಜಪಾನ್‌ನಿಂದ ವಾಸ್ತವ್ಯ ಬದಲಿಸಿದರೂ ಈ ಆರೋಪಗಳು ಬೆನ್ನುಬಿಡುವಂತೆ ಕಾಣುತ್ತಿಲ್ಲ.

■ ಹನಿ